ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಮತ್ತು ಬಂಧೀಖಾನೆ ಮಂತ್ರಿಗಳು).—

ಅ) ಇದೆ.

ಆ) ಈ ವರ್ಷದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕೆಲಸ ಪ್ರಾರಂಭಿಸಲಾಗುವುದು.

ಸನ್ಮಾನ್ಯ ಅಧ್ಯಕ್ಷರೇ, ನನ್ನ ಉತ್ತರದ ಜೊತೆಗೆ ನಾನು ಒಂದು ವಿಷಯವನ್ನು ಹೇಗೆಲಂ ಇಚ್ಚಿಸುತ್ತೇನೆ. ಅಲ್ಲಿಯ ಪಂಚಾಯತ್‌ನವರು ೨೦೦ ಅಡಿ ಉದ್ದ ಹಾಗೂ ೨೦೦ ಅಡಿ ಅಗಲ ಜಮೀನನ್ನು ಕೊಟ್ಟಿದ್ದಾರೆ, ಆ ಜಮೀನು ಬಸ್ ಸ್ಟ್ಯಾಂಡ್ ಕಟ್ಟಲು ಸಾಕಾಗುವುದಿಲ್ಲ. ಈ ಜಮೀನಿನಲ್ಲಿ ಬರಿ ಬಸ್ ಶೆಲ್ಟರ್ ಮಾತ್ರ ಕಟ್ಟಲು ಸಾಧ್ಯವಾಗಬಹುದು. ಆದುದರಿಂದ ನಾನು ಸನ್ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅಲ್ಲಿಯ ಪಂಚಾಯತಿಯವರು ಅರ್ಧ ಅಥವಾ ಮುಕ್ಕಾಲು ಜಮೀನನ್ನು ಕೊಡಲು ಮುಂದೆ ಬಂದರೆ ತಕ್ಷಣವೇ ಅಲ್ಲಿಯ ಬಸ್ ಸ್ಟ್ಯಾಂಡನ್ನು ನಿರ್ಮಿಸುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಬಿ. ಎಲ್. ಮುತ್ತಣ್ಣವರ್.—ಸನ್ಮಾನ್ಯ ಅಧ್ಯಕ್ಷರೇ ಸಾರಿಗೆ ಇಲಾಖೆಗೆ ರಿಪೀರಲ್ಲಿ ಜಾಗವನ್ನು ಕೊಡಲಾಗಿದೆ. ಅಲ್ಲದೆ ೨೫ ಸಾವಿರ ರೂಪಾಯಿಗಳ ಡಿಬೆಂಚರ್ ಲೋನನ್ನು ಸಹ ಕೊಟ್ಟಿದ್ದಾರೆ. ಆದರೆ ಇನ್ನೂ ಏನು ಕಾರ್ಯಕ್ರಮ ನಡೆದಿಲ್ಲ.

ಶ್ರೀ ವೀರಣ್ಣ.—ಸನ್ಮಾನ್ಯ ಅಧ್ಯಕ್ಷರೇ, ಸಾರ್ವಜನಿಕರ ಹಣ ನಮಗೆ ಬೇಕಾಗಿಲ್ಲ. ನಾವು ಅದರಿಂದ ಒಂದು ಪೈಸೆಯನ್ನೂ ಸಹ ನಿರೀಕ್ಷೆ ಮಾಡುವುದಿಲ್ಲ. ನಮಗೆ ಬೇಕಾಗಿರುವುದು ಬಸ್ ಸ್ಟ್ಯಾಂಡ್ ಕಟ್ಟಲು ಜಾಗ. ಈಗ ಪಂಚಾಯತಿಯವರು ಕೊಟ್ಟಿರುವ ಜಾಗದಲ್ಲಿ ಬಸ್ ಶೆಲ್ಟರ್ ಮಾತ್ರ ಕಟ್ಟಬಹುದು. ಅರ್ಧ ಅಥವಾ ಮುಕ್ಕಾಲು ಎಕರೆ ಜಮೀನನ್ನು ಪಂಚಾಯತಿಯವರು ಕೊಟ್ಟರೆ ಇನ್ನು ೧೦-೧೫ ದಿನಗಳೊಳಗೆ ಫೌಂಡೇಷನ್ ಸ್ಟೋನ್ ಹಾಕಿ ಕಾರ್ಯಕ್ರಮ ಪ್ರಾರಂಭಿಸುತ್ತೇನೆಂದು ತಿಳಿಸುತ್ತೇನೆ.

ಶ್ರೀ ಎಂ. ಎಲ್. ಮುತ್ತಣ್ಣವರ್.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಜಾಗವನ್ನು ಹ್ಯಾಂಡ್ ಓವರ್ ಮಾಡಿರುವುದು ಸರ್ಕಾರಕ್ಕೆ ಗೊತ್ತಿದೆ. ಆಗ ಸಿಂಧ್ಯಾರವರು ಸಾರಿಗೆ ಮಂತ್ರಿಗಳಾಗಿದ್ದರು. ಕೆ.ಎಸ್.ಆರ್.ಟಿ.ಸಿ.ಯವರು ಈಗಾಗಲೇ ಅದನ್ನು ಪೊಸಿಷನ್ ತೆಗೆದುಕೊಂಡಿದ್ದಾರೆ. ಆದರೆ ಏನೂ ಕೆಲಸ ಆಗಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಪಂಚಾಯತಿಯವರು ಕೊಟ್ಟಿರುವ ಜಾಗದಲ್ಲಿ ಕೆಲಸ ಪ್ರಾರಂಭ ಮಾಡಬೇಕಾದರೆ ಒಂದು ಸುಂದರವಾದ ಬಸ್ ಶೆಲ್ಟರ್ ಮಾತ್ರ ಕಟ್ಟಿ ಬಹುದು. ಬಸ್ ಸ್ಟ್ಯಾಂಡನ್ನು ಕಟ್ಟಲು ಸಾಧ್ಯ ಇಲ್ಲ.

ಅಲ್ಪಾವಧಿ ಪ್ರಶ್ನೆಗಳ ಸಂಖ್ಯೆ–೧

ವಿತವ್ಯಯ ಕ್ರಮಗಳು

೧. ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಆಡಳಿತವು ವಿತವ್ಯಯ ಕ್ರಮಗಳನ್ನು ಅನುಸರಿಸುವಂತೆ ಸರ್ಕಾರವು ಸೂಚನೆ ನೀಡಿದೆಯೆ ?

ಆ) ಈ ವಿಷಯದಲ್ಲಿ ಸರ್ಕಾರವು ಹೊರಡಿಸಿದ ಸೂಚನೆಗಳು ?

ಇ) ಈ ಸೂಚನೆಗಳನ್ನು ಹೊರಡಿಸಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ೪-೧೧-೮೬ ಮತ್ತು ೧೩-೧-೮೭ ರಂದು ಸರ್ಕಾರವು ಹೊರಡಿಸಿದ ಎರಡು ಮಿತವ್ಯಯ ಆದೇಶಗಳ ಪ್ರತಿಯನ್ನು ಲಗತ್ತಿಸಲಾಗಿದೆ. ಇವು ಸ್ವಯಂ ವೇದ್ಯವಾಗಿವೆ.

ಇ) ಉಪ ಪ್ರಶ್ನೆ 'ಆ'ಗೆ ಕೊಟ್ಟ ಉತ್ತರದಲ್ಲಿರುವಂತೆ.

ರಾಜ್ಯದ ಆರ್ಥಿಕ ಸ್ಥಿತಿಯನ್ನು ಸಂಸ್ಥಿರ ಗೊಳಿಸಲು ಕ್ರಮಗಳು

ಪ್ರಸ್ತಾವನೆ.—ಯೋಜನೇತರ ವೆಚ್ಚವನ್ನು ಕಡಿತ ಗೊಳಿಸುವುದರಿಂದ ಮತ್ತು ಸಾಧ್ಯವಾದಷ್ಟು ಮಿತವ್ಯಯವನ್ನು ಮಾಡುವುದರಿಂದ ಎಷ್ಟು ಸಾಧ್ಯವೋ ಅಷ್ಟು ಸಂಪನ್ಮೂಲ ಕ್ರೋಢೀಕರಣ ಮಾಡುವುದು ಈಗ ಅಗತ್ಯವಾಗಿದೆ. ಆದ್ದರಿಂದ ಈ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂಖ್ಯೆ. ಆರ್ಥಿಕ ಸಿ ಅಮಿತ ೮೬, ಬೆಂಗಳೂರು, ದಿನಾಂಕ ೪ನೇ ನವೆಂಬರ್ ೮೬.

೧, ಯೋಜನೇತರದಲ್ಲಿ ಹೊಸ ಹುದ್ದೆಗಳನ್ನು ಸೃಷ್ಟಿಸ ಕೂಡದು.

೨. ಖಾಲಿಯಿರುವ ಯೋಜನೇತರ ಹುದ್ದೆಗಳನ್ನು ಭರ್ತಿ ಮಾಡಕೂಡದು. ಖಾಲಿಯಿರುವ ಯೋಜನೇತರ ಹುದ್ದೆಗಳನ್ನು ತುಂಬುವಂತೆ ಕರ್ನಾಟಕ ಲೋಕಸೇವಾ ಆಯೋಗ, ಇಲಾಖಾ ನೇಮಕಾತಿ ಸಮಿತಿಗಳು ಇತ್ಯಾದಿ ನೇಮಕಾತಿ ಸಂಸ್ಥೆಗಳಿಗೆ ಸೂಚನೆ ಕೊಡ ಕೂಡದು.

೩. ಮೋಟಾರು ವಾಹನಗಳ ಖರೀದಿಗೆ ಹೊಸದಾಗಿ ಮಂಜೂರಾತಿಯನ್ನು ಕೊಡ ಕೂಡದು.

೪. ಯೋಜನೆ ಯಡಿಯಲ್ಲಿ ಹುದ್ದೆಗಳನ್ನು ಸೃಷ್ಟಿ ಮಾಡಬೇಕೆಂಬ ಎಲ್ಲಾ ಪ್ರಸ್ತಾವನೆಗಳಿಗೂ ಸಿಬ್ಬಂದಿ ಪರಾಮರ್ಶಕ ಸಮಿತಿಯು ಅನುಮೋದನೆ ಪಡೆಯತಕ್ಕದ್ದು. ಆದ್ದರಿಂದ ಅಂತಹ ಎಲ್ಲಾ ಪ್ರಸ್ತಾವನೆಗಳನ್ನು ವಿವರವಾದ ಟಿಪ್ಪಣಿಗಳೊಂದಿಗೆ ಸಿಬ್ಬಂದಿ ಪರಾಮರ್ಶಕ ಸಮಿತಿಯ ಮುಂದಿಡಲು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡತಕ್ಕದ್ದು.

೫. ಅತ್ಯಂತ ವಿಶೇಷ ಸಂದರ್ಭಗಳಲ್ಲಿ ಈ ಮೇಲಿನ ನಿರ್ಬಂಧದ ಸಡಲಿಕೆಗೆ ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆಯಬಹುದು.

೬. ಕೇಂದ್ರ ವಲಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ಮೇಲಿನ ವೆಚ್ಚವನ್ನು ಆಯಾ ಯೋಜನೆಗಳಿಗೆ ಕೇಂದ್ರ ಸರ್ಕಾರವು ಮಾಡಿರುವ ಹಂಚಿಕೆ (allocation)ಗೆ ಸೀಮಿತ ಗೊಳಿಸಬೇಕು.

೭. ಸೆಮಿನಾರುಗಳ/ಸಭೆಗಳ (conference) ಮೇಲಿನ ವೆಚ್ಚವನ್ನು ಆದಷ್ಟು ಕಡಿಮೆ ಮಾಡಬೇಕು.

೮. ಸರ್ಕಾರದಿಂದ ನಾಮ ನಿರ್ದೇಶನ ಹೊಂದಿದವರನ್ನು ಸೆಮಿನಾರುಗಳು ಮತ್ತು ಸಭೆಗಳಿಗೆ ನಿಯೋಜನೆ (Deputation) ಮಾಡುವುದನ್ನು ಆದಷ್ಟು ಕಡಿಮೆ ಮಾಡಬೇಕು.

೯. ದೂರವಾಣಿ, ಬಾಡಿಗೆ, ವಿದ್ಯುಚ್ಛಕ್ತಿ ಮೇಲಿನ ವೆಚ್ಚವನ್ನು ಆದಷ್ಟು ಕಡಿಮೆ ಮಾಡಬೇಕು.
ಈ ಆದೇಶಗಳು ತಕ್ಷಣದಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

ಬಿ.ಜಿ. ಕೃಷ್ಣಮೂರ್ತಿ,
ಸಂಶೋಧನಾಧಿಕಾರಿ,
ಆರ್ಥಿಕ ಇಲಾಖೆ.

ENGLISH TRANSLATION OF THE ECONOMY ORDER DATED 13-1-1987.

PROCEEDINGS OF THE GOVERNMENT OF KARNATAKA (FINANCE DEPARTMENT)

Subject: Effecting Economy in Travel and Office Expenses.

ORDER NO. FD 1 BEM 87, BANGALORE
DATED 13TH JANUARY 1987.

As it is absolutely essential now to effect economy in expenditure by reducing non-Plan expenditure, the following order are issued.—

i) The provision made in the Budget Estimates 1986-87 for Travel Expenses under all heads of accounts is reduced by 10%.

ii) The provision made in the Budget estimates 1986-87 for Office expenses under all heads af accounts is reduced by 5%.

These order shall come into force with immediate effect and shall be in force until 31-3-1986.

By Order and in the name of the
Governor of Karnataka,

B. G. KRISHNAMURTHY,

Research Officer,
Finance Department.

ಕರ್ನಾಟಕ ಸರ್ಕಾರದ ನಡೆವಳಿಗಳು

(ಆರ್ಥಿಕ ಇಲಾಖೆ)

ಪ್ರಯಾಣ ವೆಚ್ಚ ಮಂತ್ತು ಕಛೇರಿ ವೆಚ್ಚಗಳಲ್ಲಿ ಮಿಂತವ್ಯಯಂ ಸಾಧಿಸಂವ ಬಗ್ಗೆ

ಆದೇಶ ಸಂಖ್ಯೆ : ಆರ್ಥಿಕ ೧ ಅಮಿತ ೮೭ ಬೆಂಗಳೂರು, ದಿನಾಂಕ ೧೩ನೇ ಜನವರಿ ೧೯೮೭.

ಯೋಜನೇತರ ವೆಚ್ಚವನ್ನು ಕಡಿತಗೊಳಿಸಿ ಮಿತವ್ಯಯ ಸಾಧಿಸುವುದು ಈಗ ಅತ್ಯಗತ್ಯವಾಗಿರುವುದರಿಂದ ಈ ಕೆಳಕಂಡ ಆದೇಶಗಳನ್ನು ಹೊರಡಿಸಲಾಗಿದೆ.—

೧) ೧೯೮೬-೮೭ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಪ್ರಯಾಣ ವೆಚ್ಚಕ್ಕಾಗಿ ಒದಗಿಸಿರುವ ಹಣದ ಶೇಕಡ ೧೦ ರಷ್ಟನ್ನು ಕಡಿತಗೊಳಿಸಲಾಗಿದೆ.

೨) ೧೯೮೬-೮೭ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಕಛೇರಿ ವೆಚ್ಚಕ್ಕಾಗಿ ಒದಗಿಸಲಾಗಿರುವ ಹಣದ ಶೇಕಡ ೫ ರಷ್ಟನ್ನು ಕಡಿತಗೊಳಿಸಲಾಗಿದೆ.

ಈ ಆದೇಶಗಳು ತಕ್ಷಣದಿಂದ ಜಾರಿಗೆ ಬರುತ್ತವೆ ಮತ್ತು ೩೧ನೇ ಮಾರ್ಚ್ ೪೭ರ ವರೆಗೆ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಜಿ. ಕೃಷ್ಣಮೂರ್ತಿ

ಸಂಶೋಧನಾಧಿಕಾರಿ
ಆರ್ಥಿಕ ಇಲಾಖೆ.

ಗೆ,

೧. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು
೨. ಎಲ್ಲಾ ಇಲಾಖಾ ಮುಖ್ಯಸ್ಥರು
೩. ಅಧ್ಯಕ್ಷರು, ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ, ಬೆಂಗಳೂರು
೪. ಸರ್ಕಾರದ ಎಲ್ಲಾ ಅಪರ, ಸಹ, ಉಪ, ಅಧೀನ ಕಾರ್ಯದರ್ಶಿಗಳು
೫. ಅಂತರಿಕ ೧ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ೧ ಆರ್ಥಿಕ, ಸಹಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗಳು.
*೬. ರಿಜಿಸ್ಟ್ರಾರ್, ಉಚ್ಚ ನ್ಯಾಯಾಲಯ, ಬೆಂಗಳೂರು
*೭. ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ, ಬೆಂಗಳೂರು
*೮. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು
೯. ಎಲ್ಲಾ ಜಿಲ್ಲಾಧಿಕಾರಿಗಳು
೧೦. ಸಚಿವಾಲಯದ ಎಲ್ಲಾ ಶಾಖೆಗಳು
೧೧. ವಾರದ ವಾರ್ತಾ ಪತ್ರ.

Sri R. VENKATARAMAIAH.—In the Goverment Order No. FD 1 BEM 86, dt, 4-11-1986, you have stated that the vacant non-plan posts shall not be filled and therefore the vacancies under non-plan should not be notified to Recruitment agencies like K.P.S.C., District Level Recruitment Committees etc., ಡಿಸ್ಟ್ರಿಕ್ಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಕೂಡ ಬ್ಯಾನ್ ಮಾಡಿದ್ದಾರೆ ಬಹಳಷ್ಟು ಟೀಚರ್ಸ್ ವೇಕೆನ್ಸಿಗಳು ಇವೆ. ಕ್ಲಾಸ್ ಫೋರ್ (೪) ವೇಕೆನ್ಸಿಗಳು ಕೂಡ ಬೇಕಾದಷ್ಟಿವೆ. ಟ್ರೆಜರಿಯಲ್ಲಿ ಕೂಡ ಯಾವ ಚೆಕ್ಕುಗಳೂ ಪಾಸ್ ಆಗುತ್ತಿಲ್ಲ, ಬೌನ್ಸ್ ಆಗುತ್ತಿದೆ. ಯಾವ-ಯಾವುದಕ್ಕೂ ಸರ್ಕಾರದವರು ಮಂಜೂರಾತಿಯನ್ನು ಕೊಡುತ್ತಿಲ್ಲ.

ಅಧ್ಯಕ್ಷರು.—ತಾವು ನೇರವಾಗಿ ಪ್ರಶ್ನೆಯನ್ನು ಹಾಕಿ ?

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಿಮ್ಮ ಗವರ್ನಮೆಂಟ್ ಆರ್ಡರ್ ಪ್ರಕಾರ ಟ್ರಾವೆಲಿಂಗ್ ಎಕ್ಸ್‌ಪೆನ್ಸಸ್ ೧೦ ಪರ್ಸೆಂಟ್ ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಆಫೀಸ್ ಎಕ್ಸ್‌ಪೆನ್ಸಸ್ ೫ ಪರ್ಸೆಂಟ್ ಕಡಿಮೆ ಮಾಡಬೇಕು ಎಂದು ಹೇಳಿದ್ದಾರೆ. ನಿಮ್ಮ ಅಧಿಕಾರಿಗಳು ಈ ಆದೇಶಗಳನ್ನು ಪಾಲಿಸುತ್ತಿದ್ದಾರೆಯೇ ? ಹೀಗೆ ಖೋತಾ ಮಾಡಿರುವುದರಿಂದ ಎಷ್ಟು ಹಣ ಉಳಿತಾಯ ಆಗಿದೆ. ಎಷ್ಟು ಖರ್ಚು ಕಡಿಮೆ ಆಗಿದೆ. ಮತ್ತು ನಾನು ಮೊದಲೇ ಹೇಳಿದ ಪ್ರಕಾರ ರಿಕ್ರೂಟ್‌ಮೆಂಟ್ ಬ್ಯಾನ್ ಮಾಡಿರುವುದನ್ನು ಸರ್ಕಾರದವರು ಪುನಃ ಹಿಂದಕ್ಕೆ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಬ್ಯಾನನ್ನು ತೆಗೆಯುವುದಕ್ಕೆ ಸಾಧ್ಯವಾಗಲಾರದು. ಆದರೆ ಯಾವ ಯಾವ ಇಲಾಖೆಗಳಲ್ಲಿ ಆಗತ್ಯವಾದ ಸಿಬ್ಬಂದಿ ಬೇಕಾಗಿದ್ದಾರೋ, ಅಲ್ಲಿ ಪುನರ್ ವಿಮರ್ಶೆ ಮಾಡ

* ಪತ್ರದೊಂದಿಗೆ.

ಬಹುದು. ಉದಾಹರಣೆಗೆ ಪೋಲೀಸ್ ಇಲಾಖೆಯಲ್ಲಿ ಕೆಲವು ಸಂದರ್ಭಗಳಲ್ಲಿ ನೇಮಕಾತಿಯನ್ನು ತಡೆ ಹಿಡಿಯಲಾಗುವುದಿಲ್ಲ. ಅಲ್ಲಿ ಲಾ ಅಂಡ್ ಆರ್ಡರ್ ಸಮಸ್ಯೆ ಇರುವುದರಿಂದ ಜೀಪ್ ಡ್ರೈವರ್ ಮಂಜಾನೆಯವರು ಬೇಕಾಗುತ್ತಾರೆ. ಮತ್ತು ಪೆಟ್ರೋಲ್ ಮತ್ತು ಟ್ರಾವೆಲಿಂಗ್ ಎಕ್ಸ್‌ಪೆನ್ಸ್ ನಿಂದ ಎಷ್ಟು ಖರ್ಚು ಕಡಿಮೆ ಆಗಿದೆ ಎಂಬುದನ್ನು ಈಗ ನಿಖರವಾಗಿ ಹೇಳಲು ಸಾಧ್ಯವಿಲ್ಲ. ನಮ್ಮ ಆದೇಶಗಳನ್ನು ಕಡ್ಡಾಯವಾಗಿ ಜಾರಿಗೆ ತರುವುದರಿಂದ ಖಂಡಿತವಾಗಿಯೂ ಖರ್ಚು ಕಡಿಮೆ ಆಗುತ್ತದೆ. ಇಲ್ಲದಿದ್ದರೆ ನಾವು ಮಂಜೂರಾತಿಯನ್ನು ಕೊಡುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಉಪಾಧ್ಯಾಯರ ವೇಕೆನ್ಸಿ ಬಹಳ ಇದೆ, ಆದ್ದರಿಂದ ಉಪಾಧ್ಯಾಯರನ್ನು ಪುನಃ ರೆಕ್ರೂಟ್‌ಮೆಂಟ್ ಮಾಡಲಿಕ್ಕೋಸ್ಕರ ಅನುಕೂಲ ಮಾಡಿ ಕೊಡುತ್ತೀರಾ ? ಈಗ ಇದರ ಬಗ್ಗೆ ವಿಸ್ ಇಂಟರ್‌ಪ್ಯುಟ್ ಮಾಡಿ ಯಾವ ಬಿಲ್ಸ್, ಯಾವ ಚೆಕ್ಸ್ ಹಾನರ್ ಮಾಡದ ಹಾಗೆ ಮಾಡಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಅದನ್ನು ತಪ್ಪಿಸಿ, ಆ ಚೆಕ್ಕುಗಳಿಗೆ ಗೌರವ ಕೊಡುವಂತೆ ಮಾಡಿ ಚೆಕ್‌ಗಳು ಬೌನ್ಸ್ ಆಗದಂತೆ ನೋಡಿಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಅದನ್ನು ಅವರೇ ಹೇಳುತ್ತಾರೆ. ಇದನ್ನು ಅವರೇ ಹೇಳುತ್ತಾರೆಂದು ಕಡೆ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಹೇಳುತ್ತಾರೆ. ಮತ್ತೊಂದು ಕಡೆ ಚೆಕ್ಕುಗಳು ಬೌನ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ಹಣಕಾಸಿನ ಪರಿಸ್ಥಿಯನ್ನು ನೋಡಿಕೊಂಡು ಕೆಲವು ಚೆಕ್ಕುಗಳನ್ನು ನಾವೇ ಹಿಡಿದುಕೊಳ್ಳುತ್ತೇವೆ ಚೆಕ ಬೌನ್ಸ್ ಆಗಿಲ್ಲ. ವೇಸ್ ಅಂಡ್ ಮಿನ್ಸ್ ನೋಡಿ ಮಾಡುತ್ತೇವೆ. ಈಗ ಓವರ್‌ಡ್ರಾಫ್ಟ್ ಕೊಡತಕ್ಕದ್ದು ಇಲ್ಲ. ನಮಗೆ ತಿಳಿದಮಟ್ಟಿಗೆ ಯಾವುದೇ ರಾಜ್ಯಸರ್ಕಾರಕ್ಕೂ ಓವರ್‌ಡ್ರಾಫ್ಟ್ ಅನುಕೂಲತೆ ಇಲ್ಲ, ಮೊದಲು ಇದ್ದಂಥ ಅನುಕೂಲತೆಯನ್ನು ಕೇಂದ್ರ ಸರ್ಕಾರದವರು ವಾಪಸ್ಸು ತೆಗೆದುಕೊಂಡಿದ್ದಾರೆ. ವೇಸ್ ಅಂಡ್ ಮಿನ್ಸ್ ಎಷ್ಟು ಇದೆಯೋ ಅಷ್ಟು ಮಿತಿಯೊಳಗೆ ನಮ್ಮ ವ್ಯವಹಾರವನ್ನು ನಡೆಸಬೇಕು. ಟ್ರಜರಿಯಲ್ಲಿ ದುಡ್ಡು ಕಡಿಮೆ ಆದಾಗ ಅದನ್ನು ನೋಡಿಕೊಂಡು ವೇಸ್ ಅಂಡ್ ಮಿನ್ಸ್ ಮಿತಿ ಮೀರದಂತೆ ನಾವು ಎನ್.ಓ.ಸಿ ಕೊಡುತ್ತೇವೆ, ಮತ್ತು ಚೆಕ್‌ಗಳನ್ನು ಬಿಡುಗಡೆ ಮಾಡುತ್ತೇವೆ. ಇನ್ನು ಶಿಕ್ಷಕರ ನೇಮಕಾತಿ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ. ಈಗ ಶಿಕ್ಷಕರ ವಿಚಾರದಲ್ಲಿ ಎರಡು ವಿಷಯಗಳು ಬರುತ್ತವೆ. ಯೋಜನೆಗೆ ಸಂಬಂಧಪಟ್ಟಂಥ ಸ್ಕೀಮುಗಳು ಇವೆ ಯೋಜನೆಗೆ ಸಂಬಂಧಪಡದ ಕೆಲವು ಸ್ಕೀಮುಗಳು ಇವೆ. ಶಿಕ್ಷಕರ ನೇಮಕಾತಿ ಬಗ್ಗೆ ಪುನರ್ ವಿಮರ್ಶೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಸೆನ್ಷಿಯಲ್ ಸರ್ವೀಸ್ ಬಗ್ಗೆ ಯೋಚನೆ ಮಾಡಬೇಕು. ಜೂನಿಯರ್ ಕಾಲೇಜ್ ಲೆಕ್ಚರರ್ಸ್ ಆಗಲಿ ಪರ್ಟಿಕ್ಯುಲರ್ ಸೈನ್ಸ್ ಟೀಚರ್ಸ್, ಕೆಮಿಸ್ಟ್ರಿ ಟೀಚರ್ಸ್, ಫಿಸಿಕ್ಸ್ ಲೆಕ್ಚರರ್ಸ್ ಇಲ್ಲದೆ ಹೋದರೆ ಮಕ್ಕಳ ಶಿಕ್ಷಣ ಸಂಪೂರ್ಣವಾಗಿ ಹಾಳಾಗಿ ಹೋಗುತ್ತದೆ. ಇಂಥ ಒಂದು ಕ್ಯಾಟಗರಿ ಬಗ್ಗೆ ಬ್ಯಾನ್ ಮಾಡತಕ್ಕದ್ದು ಅಷ್ಟು ಸೂಕ್ತವಾಗಿರುವುದಿಲ್ಲ. ಇವೊತ್ತು ಎಸೆನ್ಷಿಯಲ್ ಸರ್ವೀಸ್ ಎಂದರೆ ಪೋಲೀಸ್, ಡಾಕ್ಟರ್ಸ್, ಎಜುಕೇಷನ್ ಡಿಪಾರ್ಟ್‌ಮೆಂಟ್ ಇವುಗಳ ಬಗ್ಗೆ ಆಜ್ಞೆಯನ್ನು ರಿಲ್ಯಾಕ್ಸ್ ಮಾಡುತ್ತೀರಾ ಹೇಗೆ ? ಈಗ ಎಕಾನಮಿ ಮಾಡುವ ದೃಷ್ಟಿಯಿಂದ ಏನೋ ಮಾಡಿದ್ದೀರಿ ಹೊಸ ಕಾಲೇಜುಗಳನ್ನು, ಹೊಸ ಸ್ಕೂಲುಗಳನ್ನು ತೆಗೆಯುವ ಅವಶ್ಯಕತೆ ಇದೆಯೇ ? ನಿಮ್ಮಲ್ಲಿರತಕ್ಕ ಹಣವನ್ನು ನೋಡಿಕೊಂಡು ಇವುಗಳನ್ನು ಓಪನ್ ಮಾಡಿ. ಮೊದಲು ಎಲ್ಲಿ ಓಪನ್ ಮಾಡಿದ್ದೀರಿ ಅಲ್ಲಿಗೆ ಬೇಕಾದಂಥ ಸಿಬ್ಬಂದಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ,—ನಾನು ಹಿಂದಿನ ಉತ್ತರದಲ್ಲಿ ಹೇಳಿದ ಅಂಶವನ್ನು ಮಾನ್ಯ ಖರ್ಗೆಯವರು ಗಮನಿಸಿದಂತೆ ಕಾಣಲಿಲ್ಲ. ನಾನು ಏನು ಹೇಳಿದೆ, ನೇಮಕಾತಿಯನ್ನು ನಾವು ಸಂಪೂರ್ಣವಾಗಿ ನಿಷೇಧಿಸಿಲ್ಲ. ಅವರಲ್ಲೂ ಕೂಡ ಯೋಜನೆಗೆ ಸಂಬಂಧಪಟ್ಟಂಥ ಸ್ಕೀಮುಗಳಲ್ಲಿ ಅವಕ್ಕೆ ಬೇಕಾದಂಥ ಸಿಬ್ಬಂದಿ ಇದು ಒಂದು. ಇನ್ನು ಯೋಜನೆಗೆ ಸಂಬಂಧಪಡದೇ ಇರತಕ್ಕ, ಯೋಜನೇತರ ಸ್ಕೀಮುಗಳಿಗೆ ಸಂಬಂಧಪಟ್ಟ ನೇಮಕಾತಿಗಳು ಈ ಎರಡರಲ್ಲಿ ನಾವು ಡಿಸ್ಕ್ರಿಮಿನೇಟ್ ಮಾಡುತ್ತೇವೆ. ಅತೀ ಅವಶ್ಯಕವಾಗಿ ಆದು ನಡೆಯಲೇ ಬೇಕಾದಂಥ ವಿಚಾರದಲ್ಲಿ ಆವರು ಹೇಳಿದಂಥ ಸೂಚನೆಯನ್ನು ಗಮನದಲ್ಲಿಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪಾಠಶಾಲೆಗಳಲ್ಲಿ ಒಬ್ಬೊಬ್ಬ ಉಪಾಧ್ಯಾಯರು ಮೂರು ಕಡೆಗಳಲ್ಲಿ ಪಾಠ ಮಾಡತಕ್ಕ ಉದಾಹರಣೆ ಇದೆ. ಅನೇಕ ಪಾಠಶಾಲೆಗಳನ್ನು

ಪ್ರಾರಂಭವಾಗಬೇಕಾದರೆ ಮೂರರಿಂದ ಆರು ತಿಂಗಳುಗಳ ಕಾಲ ಆಗುತ್ತದೆ. ಕಳೆದ ಎರಡು ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸ ಪರಿಸ್ಥಿತಿ ಅಧೋಗತಿಗೆ ಇಳಿದಿದೆ. ಇದನ್ನು ಗಮನಿಸಿ ವಿಶೇಷವಾದ ಆದ್ಯತೆಯ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರನ್ನು ನೇಮಿಸುವುದಕ್ಕೆ ಸರ್ಕಾರ ಈ ಆಜ್ಞೆಗೆ ವಿನಾಯ್ತಿ ಕೊಡುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ನಾನು ಗಮನಿಸುತ್ತೇನೆ.

ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ಸಂದರ್ಶನ ನಡೆಸಂತ್ತಿರುವ ಬಗ್ಗೆ

೧೨(ಬಿ). ಶ್ರೀ ಲಕ್ಕಪ್ಪ.—ಮಾನ್ಯ ಮುಖ್ಯಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈಗ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬೆರಳಚ್ಚು ಹಾಗೂ ಶೀಘ್ರಲಿಪಿಗಾರರ ನೇಮಕ ಮಾಡಲು ಸಮಿತಿಯೊಂದು ಸಂದರ್ಶನ ನಡೆಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ತಹಲ್ವರಿಗೆ ಎಷ್ಟು ಹುದ್ದೆಗಳಿಗಾಗಿ ಸಂದರ್ಶನ ನಡೆಸಂತ್ತಿದ್ದಾರೆ. (ಇಲಾಖಾವಾರು ವಿವರ ಸಚಿವಾಲಯದ ವಿವರ ಹಾಗೂ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ಬಗೆ ಪ್ರತ್ಯೇಕ ವಿವರ ಒದಗಿಸುವುದು).

ಇ) ಸದರಿ ಸಮಿತಿಯ ಬಗ್ಗೆ ಭ್ರಷ್ಟಾಚಾರದ ದೂರುಗಳೇನಾದರೂ ಸರ್ಕಾರಕ್ಕೆ ಬಂದಿವೆಯೆ ?

ಈ) ಹಾಗಿದ್ದಲ್ಲಿ ಅಂತಹ ದೂರುಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಹೌದು.

ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ೪೨೫ ಶೀಘ್ರಲಿಪಿಗಾರರ ಮತ್ತು ೧೫೯೭ ಬೆರಳಚ್ಚುಗಾರರ ರಿಕ್ತ ಸ್ಥಾನಗಳಿಗೆ ಅಭ್ಯರ್ಥಿಗಳ ಸಂದರ್ಶನವನ್ನು ನಡೆಸಲಾಗುತ್ತಿದೆ. (ಇಲಾಖಾವಾರು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಿದೆ).

ಇ) ಹೌದು.

ಈ) ದೂರುಗಳನ್ನು ಪರಿಶೀಲಿಸಲಾಗುತ್ತಿದೆ.